

**ಎಡದಿಂದ ಬಲಕ್ಕೆ**

1. ಸಾಹುಕಾರನ ಬಟ್ಟೆ ತೊಳೆಯಲೂ ಇದೇ ಸಾಬೂನು 4
3. ವಿಕಾರ ಮನವನ್ನು ಸರಿಗೊಳಿಸಿದ್ದೇ ಆತನ ಒಂದು ಮಹಾನ್ ದಾಖಲೆ 3
4. ಚೀಲಕ್ಕೆ ಕೈ ಹಾಕಿದಾಗ ಸಿಕ್ಕಿದ್ದು ಬಾಗಿಲಿನ ಬಂಧ 3
6. ಧಾರಾಳ ದಾನಗಳನ್ನಿತ್ತ ಆತ ಭಾರೀ ಸಿರಿವಂತ 4
7. ಸಿಂಹಾಸನವನ್ನು ಏರಿರುವಾಕೆ ಎಷ್ಟು ಸುಂದರ ನಗೆ ಬೀರುವವಳು ನೋಡಿ 4
9. ಆ ಹಳ್ಳಿಯಲ್ಲಿ ಹೊಲವನ್ನು ಹೊಂದಿರುವವರು ಕೆಲವರೇ ಏನಲ್ಲ 4
12. ಕಳ್ಳರೇ ಬರಲಿ, ಕೊಳ್ಳುವವರೇ ಇರಲಿ. ಶರೀರ ಮಾತ್ರ ಅದೇ 4
14. ಕಣಗಿಲೆ ಗಿಡಗಳ ಒಟ್ಟು ಸಂಖ್ಯೆಯನ್ನು ಎಣಿಸುವಂಥದ್ದು 3
15. ಗಟಾರ ದಾಟಲು ಹೋಗಿ ಅಲ್ಲೇ ಬಿತ್ತು, ಗಂಡು ಕುರಿ 3
16. ಅರಸನ ಪಕ್ಕದಲ್ಲೇ ಇರಿಸಲಾಗಿದೆ ನೋಡಿ ರುಚಿ ರುಚಿ ಅಡುಗೆ 4

**ಮೇಲಿನಿಂದ ಕೆಳಕ್ಕೆ**

1. ಆತನ ಸಂಪತ್ತನ್ನೆಲ್ಲ ಭಕ್ತಿಯಿಂದ ಬಡವರಿಗೆ ಒಪ್ಪಿಸಲಾಗಿದೆ 4
2. ಅಪಾಯ ಒದಗಿದೊಡನೆ ಎಚ್ಚರಿಸುವ ಸಾಧನವನ್ನು ನಿರ್ಮಿಸು 4
3. ವಿದ್ವಾಂಸರನ್ನು ಮೆಚ್ಚಿಸಲು ಇದೂ ಒಂದು ಕ್ರಮ 3
5. ಗೌರವದಿಂದ ಕಳಿಸುವ ಕ್ರಮವನ್ನು ಎಲ್ಲರಿಗೂ ತಿಳಿಯುವಂತೆ ಮಾಡು 3
6. ಮೊದಲಿನಿಂದಲೂ ಹಾಗೆಯೇ; ಆತನಿಗೆ ಸದಾ ದುಡ್ಡಿನ ಮೇಲೆಯೇ ಆಸೆ 4
8. ಅಂತಿಮ ನಿರ್ಧಾರದ ಬಗೆಗಿನ ಸುದ್ದಿಗಳಿಗೆಲ್ಲ ಯಾವುದೇ ಆಧಾರ ಇಲ್ಲ 4
10. ಖಾರದ ಸಾಂಬಾರವನ್ನೆಲ್ಲ ಕದ್ದು ಸಾಗಿಸಿದ ಪುಂಡ ಈತನೇ 3
11. ಚಿಕೋರಿ ಬೆರೆಸಿರುವುದರಿಂದ ನಾಲಿಗೆಗೆ ಹಿತಕರ ಹೌದೇ? 4
12. ದಮನಕನೊಂದಿಗೆ ಅಷ್ಟೇ ಪ್ರಸಿದ್ಧ ಈ ಪಂಚತಂತ್ರದ ನರಿ 4
13. ಗಾಬರಿಗೊಳಿಸಲು ಬಂದವನನ್ನು ಪರಚು 3

---

### 19–09–2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಸದ್ವರ್ತನೆ 3. ತ್ರಿಕಾಲ 4. ರಕ್ಷಿಸು 6. ಹುರಿಗಾಳು 7. ಅಧಮ 9. ಪಾನಕ 11. ಕವಿತ್ವ 13. ಕವಾಟ 15. ಅಭಿಮಾನ 17. ತಮಿಳು 18. ಕುಟಿಲ 19. ಕುತೂಹಲ

**ಮೇಲಿನಿಂದ ಕೆಳಕ್ಕೆ**

1. ಸಲಹು 2. ನೆರಳು 3. ತ್ರಿವಿಧ 5. ಸುಮನ 7. ಅನೇಕ 8. ಮಹತ್ವ 9. ಪಾತಕ 10. ಕರಟ 12. ವಿನೀತ 14. ವಾಚಾಲ 15. ಅಳುಕು 16. ನಕುಲ

ಪ್ರಶ್ನಾಂಕಣ

## ವಾನರರು ಮಾತನಾಡುವುದಿಲ್ಲ ಏಕೆ?

ಧರೆಯಲ್ಲಿ ಐದು ವಿಧಗಳ ವಾನರರಿವೆ (ಏಪ್ಸ್): ಗೊರಿಲ್ಲ (ಚಿತ್ರ 1), ಚಿಂಪಾಂಜಿ (ಚಿತ್ರ 3), ಬೋನೋಬೊ, ಒರಾಂಗೋಟಾನ್ (ಚಿತ್ರ 2) ಮತ್ತು ಗಿಬ್ಬನ್. (ಪ್ರಸ್ತುತ ಅಳಿದುಹೋಗಿರುವ ವಾನರ ಪಿತಾಮಹರ ಒಂದು ಪ್ರಭೇದ ಚಿತ್ರ 4ರಲ್ಲಿದೆ). ವಾನರರ ವಿಶೇಷ ಏನೆಂದರೆ ಅವು ದೈಹಿಕವಾಗಿ ಮತ್ತು ಜೈವಿಕವಾಗಿ ಮನುಷ್ಯರಿಗೆ ಅತ್ಯಂತ ಹತ್ತಿರದ ಸಂಬಂಧಿಗಳಾಗಿವೆ. ವಾನರರು ನಮ್ಮನ್ನೇ ಬಹುವಾಗಿ ಹೋಲುತ್ತವೆ; ಅವು ನಮ್ಮಂತೆಯೇ ಭಾವಭಾವನೆಗಳನ್ನು ಹೊಂದಿವೆ; ಅವು ನಮ್ಮ ಚಟುವಟಿಕೆಗಳನ್ನು ಅನುಕರಿಸಬಲ್ಲವು ಕೂಡ. ಅಷ್ಟೇ ಅಲ್ಲ, ಅವು ಧ್ವನಿಗಳನ್ನು ಹೊರಡಿಸಲು ನಮ್ಮಂತಹದೇ ಅಂಗ ರಚನೆಯನ್ನೂ ಪಡೆದಿವೆ. ಆದರೆ, ವಿಪರ್ಯಾಸ ಏನೆಂದರೆ, ಮಾತನಾಡಲು ಅವಶ್ಯವಾದ ಅಂಗರಚನೆಯನ್ನು ಪಡೆದಿದ್ದೂ ವಾನರರಿಗೆ ಮಾತನಾಡುವುದು ಸಾಧ್ಯವಾಗಿಲ್ಲ! ಏಕೆ ಹೀಗೆ?

ವಾಸ್ತವವಾಗಿ ಇದು ತುಂಬ ಕುತೂಹಲದ ಪ್ರಶ್ನೆ. ಅದಕ್ಕೇ ವಿಜ್ಞಾನಿಗಳು ನೂರಾರು ವರ್ಷಗಳಿಂದಲೂ ಈ ಪ್ರಶ್ನೆಗೆ ಉತ್ತರ ಕಂಡುಹಿಡಿಯಲು ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ ಸ್ಪಷ್ಟ, ನಿಖರ, ಪರಿಪೂರ್ಣ ಉತ್ತರ ಈವರೆಗೂ ಸಿಕ್ಕಿಲ್ಲ. ಇತ್ತೀಚೆಗೆ ಇಂಥದೇ ಹೊಸದೊಂದು ಶೋಧ ನಡೆಯಿತು. ವಾನರರಲ್ಲಿ ಮಾತನಾಡಲು ಬೇಕಾದ ಅಂಗರಚನೆ ಇದ್ದರೂ ಮಾತುಗಳನ್ನಾಡುವುದು ಅವಕ್ಕೆ ಏಕೆ ಸಾಧ್ಯವಾಗಿಲ್ಲ ಎಂಬುದಕ್ಕೆ ಮತ್ತೊಂದು ವಿವರಣೆ ಶೋಧಗೊಂಡಿತು. ಅದರ ವರದಿ ಸುಪ್ರಸಿದ್ಧ ಜರ್ನಲ್ 'ಫ್ರಂಟಿಯರ್ಸ್ ಆಫ್ ನ್ಯೂರೋ ಸೈನ್ಸ್' (Frontiers Of Neuro Science) ನಲ್ಲಿ ಪ್ರಕಟವಾಗಿದೆ.




ಪ್ರಸ್ತುತದ ಈ ಸಂಶೋಧನೆಯಲ್ಲಿ ವಿಜ್ಞಾನಿಗಳು ವಾನರರ ಮೆದುಳಿನ ಎರಡು ಭಾಗಗಳನ್ನು ವಿಶೇಷವಾಗಿ ಅಭ್ಯಸಿಸಿದ್ದಾರೆ. ಅವುಗಳಲ್ಲಿ ಮೊದಲಿನದು ಮಾತನಾಡುವ ಸಾಮರ್ಥ್ಯವೂ ಸೇರಿದಂತೆ ಮೆದುಳಿನಲ್ಲಿ ಸ್ವಯಂಪ್ರೇರಿತ ಚಟುವಟಿಕೆಗಳನ್ನು ನಿಯಂತ್ರಿಸುತ್ತಿರುವ ಪ್ರದೇಶಗಳು (Cortical Association Areas) ಮತ್ತು ಎರಡನೆಯದು ಶಬ್ದಗಳು ಮತ್ತು ಮಾತುಗಳನ್ನು ಉತ್ಪಾದಿಸುವ ಸ್ನಾಯುಗಳನ್ನು ನಿಯಂತ್ರಿಸುವ ಮೆದುಳಿನ ಕಾಂಡದಲ್ಲಿರುವ ನರಗುಚ್ಛಗಳು (Brain Stem Nuclei).

ಮೆದುಳಿನ ಈ ಎರಡೂ ಭಾಗಗಳ ಅಧ್ಯಯನದ ಫಲಿತಾಂಶಗಳ ಸಾರ ಇದು: ಮಾತನಾಡಲು ಅಗತ್ಯವಾದ ಅಂಗರಚನೆ ವಾನರರಲ್ಲಿ ಸಂಪೂರ್ಣ ಸುಸಜ್ಜಿತವಾಗಿದೆ. ಆದರೆ ಅದನ್ನು ಬಳಸಿ ಮಾತನಾಡಲು ಬೇಕಾದ ಬುದ್ಧಿಶಕ್ತಿ ವಾನರರಲ್ಲಿಲ್ಲ! ಆದ್ದರಿಂದಲೇ ವಾನರರು ಮಾತನಾಡುವುದು ಸಾಧ್ಯವಿಲ್ಲ!

■ ಎನ್. ವಾಸುದೇವ್